# ಹೆದ್ದಾರಿ ಎ.ಯು.ಪಿ.ಶಾಲೆ, ಬಾಯಾರು

ಅಂಚೆ ಚಿಪ್ಪಾರು–671322

Email : heddariaups@gmail.com




## ಮಂಜೇಶ್ವರ ಉಪಜಿಲ್ಲೆ, ಬಿ.ಆರ್.ಸಿ.ಮಂಜೇಶ್ವರ

# Academic Master Plan 2025-26

## ಮುನ್ನುಡಿ

2023ನೇ ಇಸವಿಯಲ್ಲಿ ಶ್ರೀಯುತ ಕೃಷ್ಣಭಟ್ ಇವರಿಂದ ಮುಳಿಗದ್ದೆ ಹೆದ್ದಾರಿ ಕಟ್ಟೆ ಸಮೀಪ ಸ್ಥಾಪನೆಗೊಂಡ
ಪ್ರಾಥಮಿಕ ಶಾಲೆ ಕ್ರಮೇಣ 1953–54ರಲ್ಲಿ ಹೆದ್ದಾರಿ ಎ.ಯು.ಪಿ.ಶಾಲೆ ಎಂಬ ನಾಮಧೇಯದಲ್ಲಿ ನಂ.1087/63–64dt
24–12–1963of DEO Kasaragod ಇವರಿಂದ ಮಾನ್ಯತೆ ಪಡೆಯಿತು. 1982ರಲ್ಲಿ ಶಾಲಾ ಸ್ಥಾಪಕರಾದ ಶ್ರೀಯುತ
ಕೃಷ್ಣ ಭಟ್ ಇವರ ನಿಧನದ ನಂತರ ಇವರ ಪುತ್ರರ ನೇತೃತ್ವದಲ್ಲಿ ಶ್ರೀ ಕೃಷ್ಣ ಭಟ್ ಮೆಮೋರಿಯಲ್ ಎಜುಕೇಶನ್ ಟ್ರಸ್ಟ್
ಬಾಯಾರು ಎಂಬ ಆಡಳಿತ ಮಂಡಳಿ ಈ ಶಾಲೆಯನ್ನು ನಿಯಂತ್ರಿಸುತ್ತದೆ. ಪ್ರಕೃತ ಶ್ರೀ ರಾಜೇಶ್ ಎನ್.ಇವರು ಶಾಲಾ
ಮ್ಯಾನೇಜರ್ ಆಗಿರುತ್ತಾರೆ. ಕಾಸರಗೋಡು ತಾಲೂಕು ಪೈವಳಿಕೆ ಪಂಚಾಯತಿನ 5ನೇ ವಾರ್ಡಿನಲ್ಲಿರುವ ಈ ಶಾಲೆಯು
ಮುಳಿಗದ್ದೆಯಲ್ಲಿದೆ. ಈ ಶಾಲೆಯ 4ಕಿ.ಮೀ. ವ್ಯಾಪ್ತಿಯ ಒಳಗೆ ಎ.ಎಲ್.ಪಿ. ಶಾಲೆ ಪೆರೋಡಿ, ಎ.ಎಲ್.ಪಿ.ಶಾಲೆ
ಬೆರಿಪದವು, ಎ.ಎಲ್.ಪಿ.ಶಾಲೆ ಪಂಚಲಿಂಗೇಶ್ವರ ಹಾಗೂ ಎ.ಎಲ್.ಪಿ.ಶಾಲೆ ಆವಳ ಇದೆ. ಈ ಮೇಲಿನ ಫೀಡಿಂಗ್
ಶಾಲೆಗಳು ನಮ್ಮ ಶಾಲೆಗೆ ಆಧಾರ ಸ್ತಂಭವಾಗಿದೆ. ಶಾಲಾ ಪಿ.ಟಿ.ಎ., ಎಸ್.ಎಸ್.ಎ. ಯ ಹಲವು ರೀತಿಯ ಕೊಡುಗೆಗಳು
ವಿದ್ಯಾರ್ಥಿಗಳನ್ನು ನಮ್ಮ ಶಾಲೆಗೆ ಆಕರ್ಷಿಸಿದ್ದು ಮಾತ್ರವಲ್ಲದೆ ಪ್ರಿಪ್ರೈಮರಿ ವಿಭಾಗ ಮತ್ತು ಇಂಗ್ಲೀಷ್ ಮೀಡಿಯಂ
ಆರಂಭಿಸಿದ್ದು ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಗೆ ಕಾರಣವಾಯಿತು. ಶಾಲೆಗೆ 2.25 ಎಕರೆ ಸ್ಥಳವಿದ್ದರೂ ಇದು
ಸಮತಟ್ಟಾದ ಇಲ್ಲದ ಕಾರಣ ಕೌಂಪೌಂಡ್ ಗೋಡೆ ಮಾಡಲು ಸಾಧ್ಯವಾಗಲಿಲ್ಲ. ನಮ್ಮ ಶಾಲೆಯಲ್ಲಿ ಸಂಸ್ಕೃತ, ಅರಬಿಕ್,

ಉರ್ದು ಹಾಗೂ 1ನೇ ಯಿಂದ 4ನೇ ತರಗತಿವರೆಗೆ ಮಲಯಾಳಂ ಕಲಿಕೆ ತರಗತಿಗಳು ಇವೆ. ನಮ್ಮ ಶಾಲೆಯಲ್ಲಿ ಪ್ರಸ್ತುತ ಪ್ರಿಪ್ರೈಮರಿಯಿಂದ 7ನೇ ತರಗತಿ ವರೆಗೆ ಒಟ್ಟು 441 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಮುಖ್ಯೋಪಾಧ್ಯಾಯರು 19 ಶಿಕ್ಷಕರು, ಒಬ್ಬರು ಸಿಬಂಧಿ ವರ್ಗ ಸೇರಿ ಒಟ್ಟು 20 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದಲ್ಲದೆ ಪ್ರಿಪ್ರೈಮರಿಯಲ್ಲಿ 2 ಅಧ್ಯಾಪಿಕೆಯರು ಒಬ್ಬರು ಅಡುಗೆ ತಯಾರಕರು ಸಹಕರಿಸುತ್ತಿದ್ದಾರೆ. ನಮ್ಮ ಶಾಲೆಯಲ್ಲಿ ಪ್ರತಿವರ್ಷ ಊರವರ ಹಾಗೂ ರಕ್ಷಕರ ಸಹಾಯದಿಂದ ಶಾಲಾ ವಾರ್ಷಿಕೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. ಉತ್ತಮವಾದ ವಾಚನಾಲಯ, ಪ್ರಯೋಗ ಶಾಲೆ ಮತ್ತು ಐ.ಟಿ.ಲ್ಯಾಬಿನ ವ್ಯವಸ್ಥೆಯಿದೆ. ನಮ್ಮ ಶಾಲೆಗೆ 102 ವರ್ಷಗಳಾಗಿದ್ದು 2023ರಲ್ಲಿ ಶತಮಾನೋತ್ಸವವನ್ನು ನಡೆಯಲಾಗಿದೆ. ನಮ್ಮ ಶಾಲೆಯಲ್ಲಿ ಸ್ಕೌಟ್, ಗೈಡ್ ತರಭೇತಿ, ವಿವಿಧ ಶಿಬಿರ ಹಾಗೂ ಕಲೋತ್ಸವ, ವಿಜ್ಞಾನ ಮೇಳಗಳಂತಹ ಪಠ್ಯೇತರ ಚಟುವಟಿಕೆಗಳಿಗೆ ತರಭೇತಿ ನೀಡಿ ಪ್ರೋತ್ಸಾಹಿಸುತ್ತಿದ್ದೇವೆ. ಕಳೆದ ವರ್ಷ 4 ಎಲ್.ಎಸ್.ಎಸ್. 4 ಮತ್ತು 3–ಯು.ಎಸ್.ಎಸ್. ದೊರಕಿರುತ್ತದೆ.

## ದೃಷ್ಟಿಕೋನ

ಒಂದು ಶಾಲೆಗೆ ಎಲ್ಲಾ ವಿಭಾಗದ ಮಕ್ಕಳು ಬರುತ್ತಾರೆ. ವಿಭಿನ್ನ ಸಾಮರ್ಥ್ಯದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಾರೆ. ಒಂದು ತರಗತಿಯಲ್ಲಿರುವ ಪ್ರತಿಯೊಂದು ಮಗುವು ಅವನ ತರಗತಿಯ ಮಟ್ಟದಲ್ಲಿ ಸಂಪೂರ್ಣವಾಗಿ ಎಲ್ಲಾ ವಿಷಯಗಳನ್ನು ತಿಳಿದಿರಬೇಕು. ಈ ನಿಟ್ಟಿನಲ್ಲಿ ಮುಂದೆ ಈ ಶಾಲೆ ಹೇಗಾಗಬೇಕು ಎಂಬುದಕ್ಕೆ ಶಾಲಾ ಎಸ್.ಆರ್.ಜಿ.ಯಲ್ಲಿ ಪಂಚಾಯತು ಜನಪ್ರತಿನಿಧಿಗಳು ಮತ್ತು ಶಾಲಾ ರಕ್ಷಕರ ಸಮಿತಿಯೊಂದಿಗೆ ಚರ್ಚಿಸಿ ಮುಂದಿನ ಯೋಜನೆಯಗಳನ್ನು ತಯಾರಿಸಲಾಗಿದೆ. ಎಲ್ಲಾ ಮಕ್ಕಳಿಗೆ ಕುಡಿಯುವ ಶುದ್ಧ ನೀರಿನ ವ್ಯವಸ್ಥೆ ಮಾಡುವುದು. ಒಂದನೇ ತರಗತಿಯಿಂದ 7ನೇ ತರಗತಿಯವರೆಗಿನ ಮಕ್ಕಳಿಗೆ ಐ.ಟಿ. ಗೆ ಹೆಚ್ಚು ಒತ್ತು ಕೊಡುವುದು ಸ್ಮಾರ್ಟ್ ಕ್ಲಾಸನ್ನು ಸಜ್ಜೀಕರಿಸುವುದು, ಜಲ ಸಂರಕ್ಷಣೆ, ಪರಿಸರ ಸಂರಕ್ಷಣೆ ಬಗ್ಗೆ ಮಾಹಿತಿ ನೀಡುವುದು. ಪ್ಲಾಸ್ಟಿಕ್ ಮುಕ್ತ ಪರಿಸರವನ್ನುಂಟುಮಾಡುವುದು. ಶೈಕ್ಷಣಿಕವಾಗಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪ್ರತ್ಯೇಕ ತರಭೇತಿ ನೀಡುವುದು ನಮ್ಮ ಮುಂದಿರುವ ಯೋಜನೆಗಳಾಗಿದೆ. ಈ ಶೈಕ್ಷಣಿಕ ವರ್ಷದಲ್ಲಿ ಸಮಗ್ರ ಗುಣಮಟ್ಟದ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡುತ್ತೇವೆ.

# ಅಕಾಡೆಮಿಕ್ ಮಾಸ್ಟರ್ ಪ್ಲಾನ್

## ಒಂದನೇ ತರಗತಿ

## 2025 - 2026

## ಹೆದ್ದಾರಿ ಎ.ಯು.ಪಿ.ಶಾಲೆ, ಬಾಯಾರು

| ವಿಷಯ | ಉದ್ದೇಶ | ಚಟುವಟಿಕೆ | ಕಲಿಕೋಪಕರಣ | ಜವಾಬ್ದಾರಿ | ಕಾಲಾವಧಿ |
|---|---|---|---|---|---|
| ಕನ್ನಡ | • ಎಲ್ಲಾ ಮಕ್ಕಳಿಗೂ ಅಕ್ಷರಮಾಲೆ ಬರೆಯಲು ಸಾಧ್ಯವಾಗುತ್ತದೆ ಮತ್ತು ಇತರರ ಸಹಾಯವಿಲ್ಲದೆ ತಮ್ಮ ಆಲೋಚನೆಗಳನ್ನು ಸಣ್ಣ ವಾಕ್ಯಗಳಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ ಎಂದು ಖಚಿತಪಡಿಸಿಕೊಳ್ಳುವುದು | • ಕನ್ನಡ ವರ್ಣಮಾಲೆಯನ್ನು ಚಾರ್ಟಿನಲ್ಲಿ ದೊಡ್ಡಕೆ ಬರೆದು ತೂಗು ಹಾಕುವುದು. ಪ್ರತಿದಿನ ಅದನ್ನು ಬರೆಸಿ ಓದಿಸುವುದು. ಸಣ್ಣ ವಾಕ್ಯಗಳನ್ನು ಓದಿಸುವುದು. ಕಥೆ ಹೇಳುವ ಮತ್ತು ಕೇಳುವ ಅಭ್ಯಾಸ ಮಾಡಿ ಕೊಡುವುದು. | ಚಾರ್ಟ್ ಮಾರ್ಕರ್ ಕಥೆ ಪುಸ್ತಕ | ತರಗತಿ ಅಧ್ಯಾಪಕ ಹಾಗೂ ರಕ್ಷಕರು. | ಜೂನ್-ಜುಲೈ |
| | • ಪಾಠದಲ್ಲಿ ಬರುವ ಪದಗಳನ್ನು, ವಾಕ್ಯಗಳನ್ನು, ಆಜ್ಞೆಗಳನ್ನು ಓದುತ್ತಾರೆ ಹಾಗೂ ಬರೆಯಲು ಪ್ರಯತ್ನ ಮಾಡುತ್ತಾರೆ ಎಂದು ಖಚಿತಪಡಿಸುವುದು. | • ಅಪರಿಚಿತ ಸರಳ ಪದಗಳನ್ನು ಬರೆಸುವುದು ಹಾಗೂ ಓದಿಸುವುದು. ಸರಳ ವಾಕ್ಯಗಳನ್ನು ಓದಿಸುವುದು ಮತ್ತು ಬರೆಸುವುದು. | ಪಠ್ಯ ಪುಸ್ತಕ ಬರಹ ಪುಸ್ತಕ | ತರಗತಿ ಅಧ್ಯಾಪಕ ಹಾಗೂ ರಕ್ಷಕರು. | ಜುಲೈ-ಮಾರ್ಚ್ |

| ವಿಷಯ | ಉದ್ದೇಶ | ಚಟುವಟಿಕೆ | ಕಲಿಕೋಪಕರಣ | ಜವಾಬ್ದಾರಿ | ಕಾಲಾವಧಿ |
|---|---|---|---|---|---|
| ಗಣಿತ | • 1 ರಿಂದ 20 ರವರೆಗೆ ಸಂಖ್ಯಾಜ್ಞಾನ ಗಳಿಸಿದ್ದಾರೆ ಎಂದು ದೃಢೀಕರಿಸುವುದು | • 1 ರಿಂದ 20 ರವರೆಗೆ ಹಂತ ಹಂತವಾಗಿ ಸಂಖ್ಯೆಗಳನ್ನು ಕಲಿಸುವುದು.<br>• ಪ್ರತಿ ಸಂಖ್ಯೆಯ ಹಿಂದಿನ ಸಂಖ್ಯೆ, ಮುಂದಿನ ಸಂಖ್ಯೆ ಎಂಬಂತೆ ಜ್ಞಾನ ಗಳಿಸುವಂತೆ ಮಾಡುವುದು.<br>• ಆರೋಹಣ, ಅವರೋಹಣ ಕ್ರಮ (1 ರಿಂದ 20 ರವರೆಗೆ) ಕಲಿಸುವುದು.<br>• ಸಂಕಲನ, ವ್ಯವಕಲನ ಕ್ರಿಯೆ ಕಲಿಸುವುದು.<br>• ದೊಡ್ಡದು - ಸಣ್ಣದು, ಉದ್ದ - ಗಿಡ್ಡ, ದೂರ - ಹತ್ತಿರ ವ್ಯತ್ಯಾಸಗಳನ್ನು ಕಲಿಸುವುದು. | Coin ಗಳು ಚಾರ್ಟ್ (numbers) | ತರಗತಿ ಅಧ್ಯಾಪಕ | ಜೂನ್ - ಜುಲೈ |

# Academic Master Plan 2025-26

# II[nd] Standard

| ವಿಷಯ | ಉದ್ದೇಶ | ಚಟುವಟಿಕೆ | ಕಲಿಕೋಪಕರಣ | ಜವಾಬ್ದಾರಿ | ಕಾಲಾವಧಿ |
|---|---|---|---|---|---|
| ಗಣಿತ | * 1000ದ ೯೯ರ ವರೆಗಿನ ಸಂಖ್ಯಾ-ಜ್ಞಾನವನ್ನು ಹೊಂದು-ದ್ವಾರ ಎಂದರೆ ಮಾತನಾಡಿಸುವುದು<br><br>* ದೊಡ್ಡ ಸಂಖ್ಯೆ ಸಣ್ಣ ಸಂಖ್ಯೆಗಳ ವ್ಯತ್ಯಾಸವನ್ನು ಕಂಡುಕೊಳ್ಳುವುದು. | * ಎಂಜಲ್ಲಿ ಕಾಯಿ, ಗೋಲಿಗಳನ್ನು ಎಣಿಸುವುದು.<br>* ಬಾಂಟ್ಲಿಗಳಿಂದ ಸಂಖ್ಯೆಗಳನ್ನು ಜೋಡಿ ಬರೆಯುವುದು.<br><br>* ಒಂದಂಕಿ ಸಂಖ್ಯೆ ಮತ್ತು 2 ಅಂಕಿ ಸಂಖ್ಯೆಗಳಲ್ಲಿ ಸಣ್ಣ ಸಂಖ್ಯೆ ಮತ್ತು ದೊಡ್ಡ ಸಂಖ್ಯೆಗಳನ್ನು ಗುರುತಿಸುವುದು. | ಎಂಜಲ್ಲಿ ಕಾಯಿ, ಗೋಲಿಗಳು<br><br>ಸಂಖ್ಯಾ ಕಾರ್ಡುಗಳು | ತರಗತಿ ಅಧ್ಯಾಪಿಕೆ<br><br>ತರಗತಿ ಅಧ್ಯಾಪಿಕೆ | ಜೂನ್-ಆಗಸ್ಟ್ |

| ವಿಷಯ | ಉದ್ದೇಶ | ಚಟುವಟಿಕೆ | ಕಲಿಕೋಪಕರಣ | ಜವಾಬ್ದಾರಿ | ಕಾಲಾವಧಿ |
|---|---|---|---|---|---|
| ಕನ್ನಡ | ತರಗತಿಯ ಮಕ್ಕಳಿಗೆ ಕನ್ನಡ ಓದಲು ಬರೆಯಲು ಕಲಿಯುವುದು. | * ಮಕ್ಕಳಲ್ಲಿ ಸ್ವರಾಕ್ಷರಗಳನ್ನು ಬರೆಯಲು ಕಲಿಸುವುದು ಬರೆಯಲು ಸಾಧ್ಯವಾಗದ ಮಕ್ಕಳಿಗೆ ಅಧ್ಯಾಪಕರ ಸಹಾಯ<br>* ವ್ಯಂಜನಾಕ್ಷರಗಳನ್ನು ನೋಡಿ ಬರೆಯುವುದು.<br>* ಅಕ್ಷರಗಳ ಕಾರ್ಡುಗಳನ್ನು ಹರಡಿ ಮಕ್ಕಳು ಗುರುತಿಸುವುದು, ಬಾಂಟ್ಲಿಯಾಗಿ ಜೋಡಿಸುತ್ತದೆ.<br>* ಕಾಗುಣಿತಾಕ್ಷರಗಳನ್ನು ಗುರುತಿಸುವ-ದು ಕ್ರಮಪ್ರಕಾರವಾಗಿ ಬರೆಯುವುದು.<br>* ಮಕ್ಕಳಿಗೆ ಕೆಲವು ಅಕ್ಷರಗಳನ್ನು ನೀಡಿ ಅಕ್ಷರಗಳನ್ನು ಉಪಯೋಗಿಸಿ ಪದ ರಚಿಸುವುದು. | ಅಕ್ಷರ ಕಾರ್ಡುಗಳು | ತರಗತಿ ಅಧ್ಯಾಪಿಕೆ | ಜೂನ್-ಆಗಸ್ಟ್.<br><br>ಸಮಯ<br>1000<br>1.45 |

| Learning Objectives | Activity | Steps | Time |
|---|---|---|---|
| Reading | * picture reading<br>* word cards | * showing picture<br>* Interaction about picture.<br>* simple words reading | June to March |
| writing | * writing simple sentences<br>* Adding lines<br>* Role play<br>* Description | * writing and Reading words.<br>* Using word web making simple sentences<br>* Add more lines<br>* Choise the character write simple dialogue<br>* Describe tha picture | |

# ACADEMIC MASTER PLAN

## III STANDARD

## 2025-26

## Heddari A U P School

## Bayar

ವಿಷಯ : English

| ಗುರಿ / ಉದ್ದೇಶ | ಚಟುವಟಿಕೆಗಳು | ಸಮಯ | ಬೆಂಬಲ | ಪ್ರದರ್ಶನ ಸಂದರ್ಭ. |
|---|---|---|---|---|
| ಎಲ್ಲಾ ಮಕ್ಕಳಿಗೂ Englishನಲ್ಲಿ ಸರಳವಾಗಿ ಮಾತನಾಡಲು, ಓದಲು, ಬರೆಯಲು ಸಾಧ್ಯವಾಗುವಂತೆ ಮಾಡುವುದು. | • Class Library ಯನ್ನು ಬಲಪಡಿಸುವುದು. | June to March. | Class teacher CPTA | |
| | • English ವಾರ್ತೆಗಳನ್ನು ಓದಲು ಸಂದರ್ಭ ಒದಗಿಸುವುದು. ICT ಬಳಸುವುದು | ವಾರದಲ್ಲಿ 1 ದಿನ. | Class teacher | School Assembly. |
| | • ಚಿತ್ರಗಳನ್ನು ನೀಡಿ ವಾಕ್ಯಗಳನ್ನು ರಚಿಸಿ ಕತೆ ಬರೆಯುವುದು. (ICT) | June to March. 1.20 to 1.45 | Classteacher. | |

ವಿಷಯ : EVS

| ಗುರಿ / ಉದ್ದೇಶ | ಚಟುವಟಿಕೆಗಳು | ಸಮಯ | ಬೆಂಬಲ | |
|---|---|---|---|---|
| ವೈಜ್ಞಾನಿಕ ಮನೋಭಾವ ಬೆಳೆಸುವುದು. | ವೀಕ್ಷಣೆ ಮಾಡಿ ತಿಳಿದು ಕೊಳ್ಳುವುದು. ಸ್ವತಃ ಪ್ರಯೋಗ ಮಾಡುವುದು. ವೀಕ್ಷಣಾ ಪಟ್ಟಿ ತಯಾರಿಸುವುದು. | June July August | Classteacher | |
| ಪ್ರಾಕೃತಿಕ ಸಂಪತ್ತಿನ ಸಂರಕ್ಷಣೆ. | ಜೈವ ವೈವಿಧ್ಯ ಉದ್ಯಾನ ನಿರ್ಮಾಣ. ಮಳೆ ನೀರು ಸಂರಕ್ಷಣೆ. ಜಲ ಮೂಲಗಳ ಸಂರಕ್ಷಣೆ. | July to December | Class teacher ರಕ್ಷಕರು. | |

ವಿಷಯ :- ಕನ್ನಡ

| ಗುರಿ / ಉದ್ದೇಶ | ಚಟುವಟಿಕೆಗಳು | ಸಮಯ | ಬೆಂಬಲ | |
|---|---|---|---|---|
| ಸ್ವರ ಭಾರ ವ್ಯತ್ಯಾಸ, ಭಾವನಾತ್ಮಕತೆಯೊಂದಿಗೆ ಓದಲು ಸಂದರ್ಭವನ್ನು ಒದಗಿಸುವುದು. | ಪಾಠಪುಸ್ತಕ ಹಾಗೂ ಅಭ್ಯಾಸ ಕೈಪಿಡಿಗೆ ಪೂರಕವಾದ ಇತರ ಪುಸ್ತಕಗಳನ್ನು ಸಂಗ್ರಹಿಸುವುದು | ಜೂನ್ ನಿಂದ ಮಾರ್ಚ್. | class teacher | |
| ಪಾಠಪುಸ್ತಕವಲ್ಲದೆ ಇತರ ವಾಚನಾ ಸಾಮಗ್ರಿಗಳನ್ನು ಒದಗಿಸುವುದು. ಅದನ್ನು ಓದಲು ಧಾರಾಳ ಸಮಯ ಒದಗಿಸುವುದು. | ಅಕ್ಷರಗಳನ್ನು ಸರಿಯಾಗಿ ನೋಡಿ ತಿಳಿಯಲು ಸಾಧ್ಯವಾಗದ ಮಕ್ಕಳಿಗೆ ಆಡಿಯೋ ಪಾಠಗಳನ್ನು ಸಂಗ್ರಹಿಸುವುದು.<br>ಭಾವನಾತ್ಮಕ ಓದುವಿಕೆಗೆ ಅವಕಾಶ. | ಜೂನ್ ನಿಂದ ಮಾರ್ಚ್. | class teacher. | |

# Academic Master Plan 2025-26

# IVth Standard

ವಿಷಯ: ಗಣಿತ

| ಗುರಿ / ಉದ್ದೇಶಗಳು | ಚಟುವಟಿಕೆಗಳು | ಸಮಯ | ಹೊಣೆ | ಪ್ರದರ್ಶನ ಸಂದರ್ಭ |
|---|---|---|---|---|
| * ಗಣಿತ ಕಲಿಕೆಯನ್ನು ಆಟದೊಂದಿಗೆ ಕಲಿಯುವುದು | * ವಿವಿಧ ತರಹ ಆಟಗಳನ್ನು ತಿಳಿಸುವುದು. ಅವುಗಳಲ್ಲಿ ಗಣಿತದ ಚತುಷ್ಕ್ರಿಯೆಗಳು ಒಳಗೊಂಡಿರುವುದು. (ಹಾವೇಣಿ, ವ್ಯಾಪಾರ, ರಂಗೋಲಿ) | June to March | Class Teacher | |
| * ರಂಗೋಲಿ ಮಾಡುವುದರ ಮೂಲಕ ಗಣಿತದ ಆಸಕ್ತಿಯನ್ನು ಹೆಚ್ಚಿಸುವುದು. | * ರಂಗೋಲಿ - ರೂಪಗಳ ಮಾದರಿ ತಯಾರಿಸಿ ಪ್ರದರ್ಶನ ನಡೆಸುವುದು. | ಪಾಠ ಬಗ್ಗೆ ಅನುಸಾರ | Class Teacher | CPTA |
| * ಗಣಿತಕ್ಕೆ ಸಂಬಂಧಿಸಿದ ಕಲಿಕೋಪಕರಣಗಳ ತಯಾರಿ ಮಾಡಿ ಕಲಿಕೆಯನ್ನು ಇನ್ನಷ್ಟು ಉತ್ತಮ ಪಡಿಸುವುದು. | * ಪಾಠಭಾಗಕ್ಕೆ ಸಂಬಂಧಿಸಿದಂತೆ ಕಲಿಕೋಪಕರಣಗಳ ಮಾದರಿಗಳನ್ನು ತಯಾರಿಸುವುದು. | June to March. | Class Teacher | |
| * ಗಣಿತ ಮೇಳ :- ಮಕ್ಕಳು ಗಳಿಸಿದ ಗಣಿತಾಸಕ್ತಿಗಳ ಪ್ರದರ್ಶನ ನಡೆಸುವುದು. | * ಮೇಳಗಳಲ್ಲಿ Quiz, Puzzle, Number patterns, Geometrical chart, Number Rhymes ಮುಂತಾದವುಗಳನ್ನು ಒಳಪಡಿಸುವುದು. | | Class Teacher SRG | ಕಲಿಕೋತ್ಸವ |

Subject: English.

| ಗುಣಗಳು / ಉದ್ದೇಶಗಳು | ಚಟುವಟಿಕೆಗಳು | ಸಮಯ | ಹೊಣೆ | ಪ್ರದರ್ಶನ ಸಂದರ್ಭ |
|---|---|---|---|---|
| * ಎಲ್ಲಾ ಮಕ್ಕಳಿಗೂ ಇಂಗ್ಲೀಷ್ ಭಾಷೆಯಲ್ಲಿ ಸರಳವಾಗಿ ಮಾತನಾಡಲು, ಓದಲು, ಬರೆಯಲು ಸಾಧ್ಯವಾಗುವಂತೆ ಮಾಡುವುದು. | * ತರಗತಿ ಗ್ರಂಥಾಲಯವನ್ನು ಬಲಪಡಿಸುವುದು.<br>* English ಪಾಠಗಳನ್ನು ಓದಲು ಸಂದರ್ಭ ಒದಗಿಸುವುದು.<br>* Storybook ಮಕ್ಕಳಿಂದ ಮಾಡಿಸುವುದು. | June to March<br>ವಾರದಲ್ಲೊಂದು | | CPTA |
| * ಇಂಗ್ಲೀಷ್ ಭಾಷೆಯಲ್ಲಿ ಡೈರಿ ಬರೆಯುವುದು. | * ಮನೆಯಲ್ಲಿ ಹಾಗು ಶಾಲೆಯಲ್ಲಿ ನಡೆದ ಅನುಭವಗಳನ್ನು ಮಕ್ಕಳು ಸರಳವಾಕ್ಯದಲ್ಲಿ ಬರೆಯುವುದು. | ವಾರದಲ್ಲಿ ಒಂದು ದಿನ | Class teacher | ಕಲಿಕೋತ್ಸವ |
| * ಇಂಗ್ಲೀಷ್ ಥಿಯೇಟರ್ - ಸೃಜನಾತ್ಮಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವುದು. | * ಪಾಠಕ್ಕೆ ಸಂಬಂಧಿಸಿದ Skit, Conversation, Rhymes, Conve Story telling etc ಗಳನ್ನು ತರಗತಿಯಲ್ಲಿ ಪ್ರದರ್ಶಿಸಲು ಅವಕಾಶ ನೀಡುವುದು. | ತಿಂಗಳಲ್ಲಿ ಒಂದು ದಿನ. | Class Teacher | |
| * ಸೃಜನಾತ್ಮಕ ಬರವಣಿಗೆಯನ್ನು ಹೆಚ್ಚಿಸಲು | * ಇಂಗ್ಲೀಷ್ Magazine :- ಮಕ್ಕಳ ರಚನೆಗಳು ಒಟ್ಟು ಸೇರಿಸಿ ಸಂಚಿಕೆ ತಯಾರಿಸುವುದು. | | | |

ವಿಷಯ : ಪರಿಸರ

| ಉದ್ದೇಶಗಳು | ಚಟುವಟಿಕೆಗಳು | ಕಾಲಾವಧಿ | ಜವಾಬ್ದಾರಿ | ಆಧಾರ |
|---|---|---|---|---|
| • ನಿರೀಕ್ಷಣೆ - ಮಾಹಿತಿ ಸಂಗ್ರಹ | • ಪಾಠಭಾಗಕ್ಕೆ ಸಂಬಂಧಿಸಿದಂತೆ Fieldtripನ್ನು ನಡೆಸುವುದು. | | HM CPTA | |
| • Science Corner:- ವೈಜ್ಞಾನಿಕ ಕಲಿಕೆಗಳಲ್ಲಿ ಆಸಕ್ತಿ ಮೂಡಿಸುವುದು. | • ವಿಜ್ಞಾನ ಕಲಿಕೆಗೆ ಅಗತ್ಯವಾದ ಸಾಮಾಗ್ರಿಗಳನ್ನು ಸಜ್ಜೀಕರಣ ಗೊಳಿಸುವುದು. | June to March | | SSA |
| • ಕೇರಳ, ಭಾರತದ ಭೂಪಟ-ಗಳ ಪರಿಚಯ ಪಡಿಸುವುದು. | • ಭೂಪಟ ನಿರೀಕ್ಷಣೆ, ಭೂಪಟ ರಚನೆ, ವಿಶೇಷತೆಗಳನ್ನು ಗುರುತಿಸಲು ಅವಕಾಶಗಳನ್ನು ನೀಡುವುದು. | | SRG class teacher | SRG. class Teacher |
| • ವಿಜ್ಞಾನೋತ್ಸವ: ವಿಜ್ಞಾನ ವಿಷಯದಲ್ಲಿ ಮಕ್ಕಳು ಗಳಿಸಿದ ವಿಷಯಗಳ ಪ್ರಯೋಗ | • ಮಕ್ಕಳ chart, ಸಂಚಿಕೆ, ಆಲ್ಬಂ, ಕುತೂಹಲಗಳು, ಪ್ರಯೋಗಗಳ ಪ್ರದರ್ಶನ ನಡೆಸಲು ವಿಜ್ಞಾನೋತ್ಸವ ಕಾರ್ಯಕ್ರಮವನ್ನು ಆಯೋಜಿಸುವುದು. | ಜನವರಿ | class Teacher | P.T.A |

# Academic Master Plan. LP


## Arabic - 2025-2026.

Heddeni AUPS Bayar.

| ക്രമ നമ്പർ | കാര്യക്രമം | പ്രവർത്തനം | കാലയളവ് | ഭൗതികം | പിന്തുണ |
|---|---|---|---|---|---|
| 1. | അറബിക് മധുരം.<br>ലക്ഷ്യം അറബിക് ഭാഷയിൽ പിന്നോക്കം നിൽക്കുന്ന കുട്ടികളെ പരിപോഷിപ്പിക്കുവാനുള്ള പ്രത്യേക പരിപാടി. | എഴുത്ത്, വായന.<br>* ടെസ്റ്റ് നടത്തി പിന്നോക്കം നിൽക്കുന്ന വിദ്യാർത്ഥികളെ കണ്ടെത്തുന്നു.<br>* അക്ഷരങ്ങൾ തിരിച്ചറിയാൻ പ്രയാസം അനുഭവിക്കുന്ന കുട്ടികൾക്ക് കാർഡ് ഷീറ്റിലെ പേപ്പറിൽ അക്ഷരങ്ങൾ നൽകി കുട്ടികൾ നിറം നൽകുക.<br>* ഓരോ കുട്ടികൾക്കും ഓരോ ടാബ് വിതരണത്തിൽ ഇൻസ്റ്റാൾ ചെയ്ത അക്ഷരമൊഴുക്ക് നൽകുന്നു. അതു, ഉച്ചാരണ ഉദാഹരണങ്ങളിൽ കുട്ടികൾ ഗെയിമിലൂടെ ആസ്വദിച്ച് അക്ഷരങ്ങൾ പഠിക്കുന്നു.<br>* പ്രത്യേകം തയ്യാറാക്കിയ മൊഡ്യൂളിന്റെ അടിസ്ഥാനത്തിൽ നിശ്ചിത സമയത്ത് അറബിക് മധുരം ക്ലാസ് നൽകുക. | 2 മാസം | പുസ്തകങ്ങൾ<br>കളേഴ്സ്.<br>ടാബ്. | ബി.ആർ.സി.<br>പൂർവ്വ വിദ്യാർത്ഥികൾ |
| 2. | വായനാ ലോകം.<br>ലക്ഷ്യം.<br>* കുട്ടിയെ വായനയുടെ ലോകത്തേക്ക് കൊണ്ടുവരൽ.<br>* നല്ല വായനക്കാരനാക്കുക. | 1. തെരഞ്ഞെടുത്ത ലളിതമായ അറബിക് പുസ്തക ശേഖരം (അറബിക് ലൈബ്രറി) പുസ്തകങ്ങൾ.<br>* ചിത്ര കഥ.<br>* കഥാപുസ്തകം.<br>* കുട്ടി കവിതകൾ.<br>* അറബിക് ക്വിസ്.<br>* ചെറിയ വിവരണ കുറിപ്പുകൾ. | 6 മാസം. | സ്കൂൾ ലൈബ്രറി.<br>ക്ലാസ് ലൈബ്രറി.<br>പുസ്തകങ്ങൾ. | സമൂഹം.<br>അറബിക് അദ്ധ്യാപകർ.<br>റിട്ടയർ ചെയ്ത നാട്ടിലെ അറബിക് അദ്ധ്യാപകർ,<br>ഭാഷാസ്നേഹികൾ<br>കുട്ടികളുടെ പുസ്തക സംഭാവന ചെയ്യൽ |



# ಯು.ಪಿ ಅಕಾಡೆಮಿಕ ಮಾಸ್ಟರ ಪ್ಲಾನ 2025-26 ಮೂಲ ವಿಜ್ಞಾನ



## Basic Science

| No. | ಉದ್ದೇಶ | ಚಟುವಟಿಕೆ | ಕಾಲ | ತರಗತಿ | ಜವಾಬ್ದಾರಿ |
|---|---|---|---|---|---|
| 1. | ಮಕ್ಕಳಲ್ಲಿ ಉದ್ಯಾನ ಚಟುವಟಿಕೆ, ಸಸ್ಯ ಬೆಳೆಸುವಿಕೆಯ ಕುರಿತು ಆಸಕ್ತಿ ಮೂಡಿಸಲು. | ಜೈವಿಕ ಉದ್ಯಾನ ನಿರ್ಮಾಣ. | June to Dec. 1:20pm to 1:45pm | 5, 6, 7 | ಅಧ್ಯಾಪಕರು OSA PTA ಆಡಳಿತ ಮಂಡಳಿ |
| 2. | ವಿಜ್ಞಾನ ಕಲಿಕೆಯ ಬಲವರ್ಧನೆ | ವಿಜ್ಞಾನೋತ್ಸವ<br>• 5, 6, 7 ನೇ ತರಗತಿಯ ಮಕ್ಕಳಿಗೆ ವೈಜ್ಞಾನಿಕ ಚಟುವಟಿಕೆಗಳು. (ಪ್ರಯೋಗಗಳು.)<br>• ಪ್ರದರ್ಶನ, ರಸಪ್ರಶ್ನೆ. | Sept to Dec | 5 ರಿಂದ 7. | ಅಧ್ಯಾಪಕರು |
| 3. | ಜೀವಿಗಳ ಕುರಿತು ಆಸಕ್ತಿ ಮೂಡಿಸುವುದು, ಇತರ ಜೀವಿಗಳನ್ನು ಪ್ರೀತಿಸುವುದು. | • ಮಕ್ಕಳನ್ನು ಗುಂಪು ಮಾಡಿ ಪ್ರತಿಯೊಂದು ಗುಂಪಿಗೂ ಬೇರೆ ಬೇರೆ ಪ್ರಾಣಿಗಳ ಮಾಹಿತಿಯನ್ನು ನೀಡುವುದು. ಅವರು ಆ ಪ್ರಾಣಿಗಳ ಜೀವನ ಚಕ್ರ, ಆಹಾರ ಶ್ರೇಣಿ, ಪರಿಸರದ ಅಗತ್ಯತೆಗಳನ್ನು ಪರಿಶೀಲಿಸಿ ಪ್ರಸ್ತುತ ಪಡಿಸುವುದು. | June to Sept. 1:20pm to 1:45 | | ಅಧ್ಯಾಪಕರು, PTA |

# ಯು.ಪಿ
# ಅಕಾಡೆಮಿಕ್ ಮಾಸ್ಟರ್ ಪ್ಲಾನ್
# ಗಣಿತ
# 2025-26

## ಗಣಿತ 2025-26

| SL.No. | ಉದ್ದೇಶಗಳು | ಚಟುವಟಿಕೆಗಳು | ಕಾಲಾವಧಿ | ತರಗತಿ | ಜವಾಬ್ದಾರಿ |
|---|---|---|---|---|---|
| 1 | ಗಣಿತದ ಬಗ್ಗೆ ಆಸಕ್ತಿ ಮೂಡಿಸುವುದು | ಗಣಿತ ವಾತಾವರಣ ನಿರ್ಮಾಣ. | ಜೂನ್ | 5 ರಿಂದ 7 | ಗಣಿತ ಅಧ್ಯಾಪಕರು |
| 2 | ಚತುರ ವಿದ್ಯಾರ್ಥಿಗಳಿಗೆ ಒತ್ತು ನೀಡುವುದು. | ಬಾಂದ್ಲರ್ ಲೆಕ್ಕಗಳಿಗೆ ಪ್ರೋತ್ಸಾಹ ನೀಡುವುದು. | | 5 ರಿಂದ 7 | ಗಣಿತ ಅಧ್ಯಾಪಕರು |
| 3. | ಗಣಿತ ಕಲಿಕೆಯನ್ನು ಬಲಪಡಿಸುವುದು. | • ಕ್ವಿಜ್<br>• ಕೋನಮಾಪಕಗಳ ತಯಾರಿ<br>• ಗಡಿಯಾರ ತಯಾರಿ<br>- ಜಿಯೋಮೆಟ್ರಿಕಲ್ ಚಾರ್ಟ್ ರಚನೆ<br>• | ಜೂನ್ to ಸೆಪ್ಟೆಂಬರ್ | 5 ರಿಂದ 7 | ಗಣಿತ ಅಧ್ಯಾಪಕರು. |
| 4 | ಸ್ವಯಂ ಕಲಿಕೆಗೆ ಸಹಾಯ | • ಗಣಿತ ಲ್ಯಾಬ್, ಗಣಿತೋಪಕರಣಗಳ ಸಂಗ್ರಹ, ಗಣಿತ ಮ್ಯಾಗಜಿನ್ ತಯಾರಿ, ಗಣಿತ ನಿಘಂಟು | ಜೂನ್ to September | 5 ರಿಂದ 7 | ಗಣಿತ ಅಧ್ಯಾಪಕರು |

# ಅಕಾಡೆಮಿಕ್ ಮಾಸ್ಟರ್ ಪ್ಲಾನ್ 2025-26

# ಸಮಾಜ ವಿಜ್ಞಾನ

[ಯು.ಪಿ]

| ಗುರಿ / ಉದ್ದೇಶ | ಚಟುವಟಿಕೆಗಳು | ಸಮಯ | ಭೌತಿಕ ಸಹಾಯ |
|---|---|---|---|
| 1. ಸಮಾಜ ವಿಜ್ಞಾನದ ಮೂಲಭೂತ ಜ್ಞಾನ ಹಾಗೂ ಪರಿಕಲ್ಪನೆಗಳನ್ನು ಪರೀಕ್ಷಿಸುವುದು. ಹಾಗೂ ಅವುಗಳನ್ನು ಗಳಿಸುವಂತೆ ಮಾಡುವುದು | ಮೂಲಭೂತ ಜ್ಞಾನ ಗಳಿಕೆಗಾಗಿ ಪೂರ್ವಜ್ಞಾನ ಸಂಬಂಧಿತ ರಸಪ್ರಶ್ನೆ, ಪ್ರಶ್ನೋತ್ತರ ಮುಂತಾದ ಚಟುವಟಿಕೆಗಳನ್ನು ನಡೆಸುವುದು. | ಶಾಲಾರಂಭದಿಂದ ಜೂನ್ ತಿಂಗಳ ಕೊನೆಯವರೆಗೂ | ಸಮಾಜ ವಿಜ್ಞಾನ ಶಿಕ್ಷಕರು. |
| 2. ಚಾರಿತ್ರಿಕ/ಐತಿಹಾಸಿಕ ಅರಿವನ್ನು ಮೂಡಿಸಿ ಅವುಗಳನ್ನು ಮುಂದಿನ ಪೀಳಿಗೆಗಾಗಿ ರಕ್ಷಿಸುವುದು. | ಪ್ರಪಂಚದ/ ದೇಶದ/ ರಾಜ್ಯದ/ ಪ್ರಾದೇಶಿಕ ಪ್ರಸಿದ್ಧ ಐತಿಹಾಸಿಕ ಮಹತ್ವಪೂರ್ಣ ಸ್ಥಳಗಳ ಕುರಿತು ICT ಮೂಲಕ ವಿಡಿಯೋ ಪ್ರದರ್ಶನ Virtual field trip ನ ಅನುಭವ ಪಡೆಯುವಂತೆ ಮಾಡುವುದು. | ಜುಲಾಯಿ | ಸ. ವಿ. ಶಿಕ್ಷಕರು. |
| 3. ಪ್ರಜಾಪ್ರಭುತ್ವದ ಅರಿವು ಮೂಡಿಸುವುದು. | ಪೋಷಕರೊಂದಿಗೆ ಗ್ರಾಮ ಸಭೆಗಳಲ್ಲಿ, ವಾರ್ಡ್ ಸಭೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು. ವಾರ್ಡ್ ಸದಸ್ಯರು/ ಪಂಚಾಯತು ಅಧ್ಯಕ್ಷರೊಂದಿಗೆ ಸಂದರ್ಶನ ನಡೆಸುವುದು. | ಆಗೋಸ್ತು | ಪೋಷಕರು, ಸ. ವಿ. ಶಿಕ್ಷಕರು. |

| ಗುರಿ / ಉದ್ದೇಶ | ಚಟುವಟಿಕೆಗಳು | ಸಮಯ | ಭೌತಿಕ ಸಹಾಯ |
|---|---|---|---|
| 4. ಪ್ರಾಕೃತಿಕ ವಿಕೋಪಗಳ ಬಗ್ಗೆ ಅರಿವು ಮೂಡಿಸುವುದು. ರಕ್ಷಣಾ ಕಾರ್ಯಗಳಲ್ಲಿ ಭಾಗವಹಿಸಲು ತಮ್ಮನ್ನು ತಾವು ಪ್ರೇರೇಪಿಸುವಂತೆ ಮಾಡುವುದು. | ಭೂಕಂಪ, ಸುನಾಮಿ, ಪ್ರವಾಹ, ಭೂಕುಸಿತ ಇತ್ಯಾದಿ ನೈಸರ್ಗಿಕ ವಿಕೋಪಗಳು, ದುರಂತಗಳ ತೀವ್ರತೆಯನ್ನು ICT ಮೂಲಕ ಪ್ರದರ್ಶಿಸುವುದು. ಅಗ್ನಿಶಾಮಕ ಸಿಬ್ಬಂದಿಗಳನ್ನು ಕರೆದು ಪ್ರಾತ್ಯಕ್ಷಿಕೆ ತರಗತಿಗಳನ್ನು ನಡೆಸುವುದು. | ಆಗೋಸ್ತು | ಸ. ವಿ. ಅಧ್ಯಾಪಕರು ಹಾಗೂ ಅಗ್ನಿಶಾಮಕ ಸಿಬ್ಬಂದಿ. |

# ಯು. ಪಿ. ಅಕಾಡಮಿಕ್

# ಮಾಸ್ಟರ್ ಪ್ಲಾನ್.

## 2025 - 26.

## ಕನ್ನಡ.



| ಮಾಂಡಲ. | ಚಟುವಟಿಕೆಗಳು | ಕಾಲಾವಧಿ | [illegible] | [illegible] |
|---|---|---|---|---|
| | ಉಪಕಾರ ಮಾಡುವುದು.<br>• ಉಕ್ತಲೇಖನ ಮಾಡುವುದು.<br>• ನಿರ್ದಿಷ್ಟ ಅಕ್ಷರಗಳ ಪದಗಳನ್ನು ನಿರ್ದಿಷ್ಟ ಸಮಯದಲ್ಲಿ ಬರೆಯುವುದು. | | | |
| ಭಾಷಾ ಕಲಿಕೆಯಲ್ಲಿ ಸ್ವಂತ ಆಲೋಚನೆಗಳನ್ನು ಬೆಳೆಸುವ ಮೂಲಕ ಬರವಣಿಗೆ, ರಚನೆಗಳಲ್ಲಿ ಅಭಿವ್ಯಕ್ತಿಸುವುದು | • ಚಿತ್ರ ವೀಕ್ಷಣೆಯ ಬಳಿಕ ಅದರ ಟಿಪ್ಪಣಿ ರಚನೆ<br>• ಅನುಭವದ ಟಿಪ್ಪಣಿ ರಚನೆ<br>• ಚಿತ್ರ ವೀಕ್ಷಿಸಿ ಕಥೆ ರಚಿಸುವುದು.<br>• ಕಥೆ ವಿಸ್ತರಿಸಿ ಪೂರ್ಣಗೊಳಿಸುವುದು.<br>• ಸಂಭಾಷಣೆಯನ್ನು ಊಹಿಸಿ ಮುಂದುವರಿಸಿ ಬರೆಯುವುದು.<br>• ಕಥೆಯನ್ನು ಸಂಭಾಷಣೆಗೆ ಬದಲಾಯಿಸುವುದು.<br>• ದಿನಚರಿ ಬರೆಯುವುದು. | September to ~~Octo~~ November ಮಧ್ಯಾರ್ಧ. | | |

18 Aug 2025, 12:26 pm

# Academic Master plan

# English - 2025-26

Subject: English 2025-26

| Learning Objectives | Activity | Steps | Duration | Responsibility |
|---|---|---|---|---|
| * Reading | - Small story reading | - Collecting news, small stories and reading in the class, | Afternoon 1:15 to 1:40 Weekly | English teacher |
| * Listening | - News reading | | | |
| | - Listening poems | | | |
| * Speaking | - short stories | - Giving opportunity to listen the conversation, singing poem, and news reading. | Weekly | Class teacher |
| | - News reading | | | |
| | - Conversation | | | |
| * Writing | - Skit | - Encouraging students to write small day to day using dialogue After that small skits. | Monthly | |
| | - Dialogue | | | |
| | - Short stories skit, poem thought. | Small stories, poems riddles, thoughts etc. | | |

# हिंदी

# शैक्षणिक मास्टर प्लान

# 2025-26

| कार्यक्रम | गतिविधियाँ | समय |
|---|---|---|
| • अक्षरों, चिह्नों आदि को पहचानने का अभ्यास<br>• छात्रों को उच्चारण की शुद्धता पर अधिक ध्यान देना। | • प्रि-टेस्ट चालाना। पीछेवाले बच्चों को उनके स्तर के अनुसार गतिविधियाँ देना। जैसे- अक्षरभ्यास, शब्द, वाक्य लिखाना, पढाना (सुरीली कार्ड से) - आगे बढ़ने को प्रोत्साह करना।<br>• हिन्दी वर्णमाला का परिचय<br>• अक्षर ज़ोर से पढे जाते हैं।<br>• कठिन शब्द श्यामपट पर लिखकर उनका उच्चारण कराना।<br>• सरल शब्द को पहचानकर लिखाना | जून से<br>जून से फरवरि तक |
| ऐ सी टी द्वारा अक्षरो के बारे में जानकारी | • शब्दों से वाक्य बनाने का प्रक्रिया चलाना | जुलाई |
| घर एक परिक्षणालय | • गृहोपयोगी वस्तुओ का तालिका हिन्दी में तैयार करना<br>• रिस्तेदार का परिचय<br>• कक्षा के वस्तुओं का नाम पहचानना, लिखाना। | पाठ के अनुसार<br>जून से फरवरी तक |
| कक्षा और प्रकृति से संबंधित गतिविधियाँ | • कक्षा के वस्तुओं का नाम पहचानना, लिखाना।<br>• प्रकृति में पाए जानेवाली फल, सब्जी, चिड़िया जानवर शब्द पहचान, हिन्दी में लिखाना। | जून से फरवरी तक |

last AD. 26-3.25
3.6.24

# अक्काडमिक् मास्टर् प्लान्

## संस्कृतम् 2025-2026

| लक्ष्यम् | क्र.सं | प्रवर्तनम् | समयः | भौतिकम् | साम्पत्तिकम् | साहाय्यम् |
|---|---|---|---|---|---|---|
| — भाषापरिज्ञानम् — | १<br>२.<br>३<br>४.<br><br>५.<br><br>६. | अक्षरज्ञानम्<br>अक्षरकार्ड् निर्माणम्।<br>पदपत्रम् पदनिर्माणम्।<br>नित्यदर्शनवस्तूनां संस्कृतपदज्ञानम्।<br>नामपद, क्रियापद वर्गीकरणम्।<br>लिङ्गज्ञानम् वचनज्ञानम्। | जून — ऑक्टोबर् | चार्टपत्रम् अक्षराणां/पदानां च प्रदर्शनम्, ICT पदपट्टिका class room materials | 2000/- | अध्यापकः संस्कृतसहायः, गृहजनाः, ग्रन्थालयः |
| | ७. | निघण्टुनिर्माणम्<br>दिनाचरणानि | वर्षपर्यन्तम् | " | 2000/- | " |
| | ८. | विभक्तिपरिचयः | नवम्बर त. फरवरि | " | | |
| | ९ | वाक्यलेखनम्<br>संभाषणम् | कक्ष्यायां प्रचलति | " | 1000/- | " |

Academic Master Plan 2025-26 Urdu

| Sl No | Programme | Activity | Duration | | Support. |
|---|---|---|---|---|---|
| 1. | ഭാഷാപരമായ പിന്നോക്കാവസ്ഥ പരിഹരിക്കൽ | 1. Pre test (4-6-25)<br>2. അക്ഷരം ഉറപ്പിക്കൽ<br>3. അക്ഷര കാർഡ് നിർമ്മാണം<br>4. വാക്കുകൾ എഴുതിക്കൽ<br>5. വാക്കുകൾ നിർമ്മിക്കുക<br>6. വാക്യങ്ങൾ നിർമ്മിക്കുക<br>7. ചിത്രത്തിന് അടിക്കുറിപ്പ്<br>8. ചിത്രം - കഥ പറയൽ<br>9. ചിത്രം - കഥ എഴുതൽ<br>10. ഭാഷാപരമായി പിന്നോക്കം നിൽക്കുന്നവർക്ക് പ്രത്യേക ക്ലാസ് | 3 mnth June to Augest | Cards<br>books<br>CD<br>Projector | Teacher<br>PTA<br>[illegible] |
| 2. | കുട്ടികളെ മികച്ച വായനക്കാരനാക്കുക | 1. ക്ലാസ് വായനക്കൂട്ടം രൂപീകരിക്കുക.<br>2. വായന മൂല, ക്ലാസ് ലൈബ്രറി രൂപീകരിക്കൽ<br>4. സമീപ ഗ്രന്ഥശാല സന്ദർശനം<br>5. വായനാനുഭവം പങ്കുവെക്കൽ<br>6. E-reading<br>7. പാഠപുസ്തക വായന മത്സരം. | 6 mnth | ക്ലാസ് ലൈബ്രറി<br>സ്കൂൾ ലൈബ്രറി<br>Internet<br>Computer<br>books | Teacher<br>PTA |

## ಭೌತಿಕ ಯೋಜನೆ

| ಉದ್ದೇಶ | ಚಟುವಟಿಕೆ | ಕಾಲಾವಧಿ | ಮೊತ್ತ | ಜವಾಬ್ದಾರಿ |
|---|---|---|---|---|
| ಶೈಕ್ಷಣಿಕ ಚಟುವಟಿಕೆಗೆ ಪೂರಕವಾಗಿ ವಾತಾವರಣವನ್ನುಂಟು ಮಾಡುವುದು | ಚಟುವಟಿಕೆ 1.ಮಕ್ಕಳಿಗೆ ಸಾಕಷ್ಟು ಬೆಂಚು, ಡೆಸ್ಕುಗಳನ್ನು ಒದಗಿಸುವುದು | ದೀರ್ಘಕಾಲ | 50000 | ಪಿ.ಟಿ.ಎ. ಆಡಳಿತ ಮಂಡಳಿ ಒ.ಎಸ್.ಎ. |
| | ಕಂಪೌಂಡ್ ಗೋಡೆ | ದೀರ್ಘಕಾಲ | 200000 | ಒ.ಎಸ್.ಎ., ಆಡಳಿತ ಮಂಡಳಿ |
| | ಶುದ್ಧ ಕುಡಿಯುವ ನೀರಿನ ವಿತರಣೆ ಯೋಜನೆ | | 50000 | ಒ.ಎಸ್.ಎ., ಪಿ.ಟಿ.ಎ.,ಆಡಳಿತ ಮಂಡಳಿ, ಊರವರು |

## ಉಪಸಂಹಾರ

ವಿದ್ಯಾಲಯ ಎಂಬುದು ಸಮಾಜದ ಅವಿಭಾಜ್ಯ ಅಂಗ. ಎಲ್ಲಾ ಜಾತಿ ಬೇಧ ಮರೆತು ಒಟ್ಟಿಗೆ ಕುಳಿತು ಕಲಿಯುವ, ಆಡುವ ಕೇಂದ್ರ, ಶ್ರೀಮಂತರು ಬಡವ ಎಂಬುದನ್ನು ಮರೆತು, ಕಲೆ ಸಂಸ್ಕೃತಿಯನ್ನು ಕಲಿತು ಮುಂದಿನ ಜನಾಂಗಕ್ಕೆ ಒಬ್ಬ ಉತ್ತಮ ಪ್ರಜೆಯನ್ನು ರೂಪಿಸುವಲ್ಲಿ ವಿದ್ಯಾಲಯ ಪ್ರಮುಖ ಪಾತ್ರವಹಿಸುತ್ತದೆ. ಇಂದಿನ ಕಾಲದಲ್ಲಿ ಎಲ್ಲಾ ಮಕ್ಕಳಿಗೆ ಉತ್ತಮವಾದ ಕಲಿಕಾ ವಾತಾವರಣವನ್ನುಂಟುಮಾಡುವುದು ನಮ್ಮ ಆದ್ಯ ಕರ್ತವ್ಯ. ಮಗುವಿನಲ್ಲಿರುವ ಪ್ರತಿಭೆಗಳನ್ನು ಕಂಡುಹುಡುಕಿ ಅವರನ್ನು ಪ್ರೋತ್ಸಾಹಿಸುವ ಜವಾಬ್ದಾರಿ ನಮ್ಮ ಮೇಲಿದೆ. ಅಧ್ಯಾಪಕರಷ್ಟೇ ಜವಾಬ್ದಾರಿ ಹೆತ್ತವರಿಗೂ ಇದೆ. "ಉಚಿತ ಶಿಕ್ಷಣ, ಕಡ್ಡಾಯ ಶಿಕ್ಷಣ" ಪ್ರತಿಯೊಂದು ಮಗುವಿನ ಹಕ್ಕು. ಈ ಶೈಕ್ಷಣಿಕ ವರ್ಷದಲ್ಲಿ ಸರಕಾರದ ನಿರ್ದೇಶನದಂತೆ ಸಮಗ್ರ ಗುಣಮಟ್ಟದ ವಿದ್ಯಾಭ್ಯಾಸವನ್ನು ನಡೆಸುವುದಕ್ಕಾಗಿ ಹಲವಾರು ಯೋಜನೆಗಳನ್ನು ರೂಪೀಕರಿಸಿದ್ದೇವೆ. ಈ ನಿಟ್ಟಿನಲ್ಲಿ ಇದೆಲ್ಲವನ್ನೂ ಒದಗಿಸಲು ಶಾಲೆಗಳಲ್ಲಿ ಶೈಕ್ಷಣಿಕವಾದ ಮತ್ತು ಭೌತಿಕವಾದ ಉದ್ದೇಶಗಳನ್ನು ಇಟ್ಟು ಹಲವಾರು ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಒಂದು ತರಗತಿಯಲ್ಲಿರುವ ಪ್ರತಿಯೊಂದು ಮಗುವು ಕಲಿಕೆಯಲ್ಲಿ ಮುಂದೆ ಬರಬೇಕು. ಅವನಿಗೆ ಬೇಕಾದ ಕಲಿಕಾ ವಾತಾವರಣವನ್ನು ಒಗದಿಸುವುದು ಊರವರು, ರಕ್ಷರಾದ ನಮ್ಮ ಕರ್ತವ್ಯ. ಈ ಯೋಜನೆಗಳೆಲ್ಲಾ ಸಾಕಾರಗೊಂಡಲ್ಲಿ ಮಕ್ಕಳು ಉತ್ತಮ ಪ್ರಜೆಗಳಾಗಬಹುದು. ಹಾಗೆಯೇ ಆಗಲಿ ಎಂದು ನಮ್ಮೆಲ್ಲರ ಆಶಯ.